

ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

ನನ್ನ ಒಬ್ಬಳೇ ಮಗಳಿಗೀಗ 26 ವರ್ಷ. ಸಾಫ್ಟ್‌ವೇರ್ ಎಂಜಿನಿಯರ್, ಮೂರು ವರ್ಷಗಳಿಂದ ಚೆನ್ನೈನಲ್ಲಿದ್ದಾಳೆ. ಬಾಲ್ಯದಿಂದಲೂ ಯಾವುದನ್ನೂ ಮರೆಮಾಚದೆ ಹೇಳುವ ಸ್ವಭಾವದವಳು. ವಿದ್ಯಾಭ್ಯಾಸದಲ್ಲಿ ಯಾವಾಗಲೂ ಮುಂದು. ಅವಳ ಆಸಕ್ತಿಗಳೆಲ್ಲವೂ ನಮ್ಮ ಮನೆಯ ಆಚಾರದ ಚೌಕಟ್ಟಿನಲ್ಲಿಯೇ ಇರುತ್ತಿತ್ತು. ಇದು ನಮಗೆ ಹೆಮ್ಮೆ ಅನ್ನಿಸುತ್ತಿತ್ತು. ಅವಳು ಮದುವೆಯ ವಯಸ್ಸಿಗೆ ಬಂದಿದ್ದಾಳೆಂದು ನಾಲ್ಕೈದು ವರ್ಷಗಳಿಂದ ವಿವಾಹದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆವು. ಏನೇನೋ ಕಾರಣ ಹೇಳಿ ಮುಂದೂಡುತ್ತಿದ್ದಳು. ಅವಳ ಮನಸ್ಸಿಗೆ ವಿರೋಧವಾಗಿ ಮಾತಾಡುವ ಬಲ ನಮ್ಮಲ್ಲಿ ಇರಲಿಲ್ಲ. ಅವಳದೇ ಅಂತಿಮ ನಿರ್ಧಾರ ಎನ್ನುವ ಅಭಿಪ್ರಾಯ ನಮ್ಮದು. ಅವಳ ಆಯ್ಕೆಗೆ ಕಾಲಾವಕಾಶ ಬೇಕಿದೆ ಎಂದು ಸುಮ್ಮನಿದ್ದೆವು. ಕಳೆದ ತಿಂಗಳು ನಮ್ಮ ಮನೆಯವರು ಅವಳಿದ್ದಲ್ಲಿಗೆ ಹೋಗಿದ್ದಾಗ ಕಂಡ ದೃಶ್ಯ ನಮಗೆ ಆಘಾತವನ್ನು ಮಾಡಿತು. ಅನ್ಯ ರಾಜ್ಯದ ಹುಡುಗನೊಂದಿಗೆ 'ಲಿವ್-ಇನ್ ಸಂಬಂಧದಲ್ಲಿದ್ದಾಳೆ ಎನ್ನುವುದನ್ನು ಹೇಗೆ ತೆಗೆದುಕೊಳ್ಳಬೇಕೆಂಬುದೇ ತಿಳಿಯಲಿಲ್ಲ. ಇದನ್ನು ಕಣ್ಣಾರೆ ಕಂಡ ನಮ್ಮ ಮನೆಯವರಿಗಂತೂ ಎಲ್ಲದರ ಬಗ್ಗೆಯೂ ಜುಗುಪ್ಸೆ. ಈ ಬಗ್ಗೆ ಅವಳೊಂದಿಗೆ ಅಲ್ಲಿಯೇ ಮಾತನಾಡಿ ತಿಳಿವಳಿಕೆ ಹೇಳುವ ಪ್ರಯತ್ನ ಮಾಡಿ ಸೋತಿದ್ದಾರೆ. ನಾನು ತಾಯಿ ಮತ್ತು ಸ್ತ್ರೀ ಸಹಜವಾದ ರೀತಿಯಲ್ಲಿ ಸಾಕಷ್ಟು ಮಾತಾಡಿದೆ. ಅದರಿಂದೇನು ಪ್ರಯೋಜನವಾದಂತೆ ಇಲ್ಲ. ಈಗ ನಮ್ಮಿಬ್ಬರನ್ನು ಕಾಡುತ್ತಿರುವ ದೊಡ್ಡ ಪ್ರಶ್ನೆ ಎಂದರೆ ನನ್ನ ಮಗಳ ಸ್ವಭಾವದಲ್ಲಿ ಇಂತಹ ಬದಲಾವಣೆ ಆಗುವುದಕ್ಕೆ ಕಾರಣವೇನಿರಬಹುದು ಮತ್ತು ಅವಳ ನಿರ್ಧಾರವನ್ನು ಬದಲಾಯಿಸಲು ಸಾಧ್ಯವೆ ಎನ್ನುವುದು. ಹಾಗೆಯೇ ಇಂತಹ ಸಂಬಂಧಗಳು ಶಾಶ್ವತವಾಗಿ ಇರಬಲ್ಲದೆ? ಇವುಗಳನ್ನು ನಾವು ಒಪ್ಪಿಕೊಂಡು ಬದುಕುವುದು ಹೇಗೆ ಎನ್ನುವ ಭಾವನೆ ನಮ್ಮ ನೆಮ್ಮದಿಯನ್ನು ಸಂಪೂರ್ಣ ಕೆಡೆಸಿದೆ. ಯಾವ ಕೊರತೆಯನ್ನು ಉಂಟುಮಾಡದೆ, ಉತ್ತಮವೆನ್ನುವ ರೀತಿಯಲ್ಲಿ ಪಾಲನೆ, ಪೋಷಣೆ ಮಾಡಿದ್ದರೂ ಹೀಗಾಯಿತ್ತಲ್ಲ ಎನ್ನುವ ಕೊರಗಿನಿಂದ ನರಳುತ್ತಿದ್ದೇವೆ. ಇದಕ್ಕೇನಾದರೂ ಪರಿಹಾರವಿದೆಯೆ? ದಯಮಾಡಿ ತಿಳಿಸಿ.

-ಶ್ವೇತ ಶೇಷಾದ್ರಿ, ಬೆಂಗಳೂರು

ಪೋಷಕರು ತಮ್ಮ ಮಕ್ಕಳ ಬಗ್ಗೆ ಇಟ್ಟುಕೊಳ್ಳುವ ನಿರೀಕ್ಷೆ ತಪ್ಪಾಗುವುದು ಅಪರೂಪವೇನಲ್ಲ. ನಿಮ್ಮ ಮಗಳ ವೈವಾಹಿಕ ಬದುಕನ್ನು ಕಡೆಗಾಣಿಸಿರುವ ಇಂತಹ ಪರಿಸ್ಥಿತಿಗೆ ಮನೆ ವಾತಾವರಣ ಕಾರಣ ಎನ್ನಲಾಗದು. ಈ ರೀತಿಯ ಪ್ರಸಂಗಗಳಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಿರುವ ವಿಷಯವೆಂದರೆ ಯೌವನದತ್ತ ಸಾಗುವ ಮಕ್ಕಳಲ್ಲಿ ಉಂಟಾಗುವ ಭಾವನಾತ್ಮಕತೆಗೆ ಸಂಬಂಧಿಸಿದ ಬದಲಾವಣೆಗಳು. ಇವುಗಳು ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಕಾಣಿಸಿಕೊಳ್ಳುವಂತಹದ್ದು ಎಂದುಕೊಂಡಷ್ಟು ಒಳ್ಳೆಯದು. ಅದರಲ್ಲಿಯೂ ವಿದ್ಯಾವಂತ ಮಕ್ಕಳು ತಮ್ಮ ಸ್ವಂತಿಕೆಯನ್ನು ವ್ಯಕ್ತಪಡಿಸುವ ಸಮಯದಲ್ಲಿ ಪೋಷಕರ ಹಿತಾಹಿತಗಳತ್ತ ಗಮನ ಹರಿಸದಿರುವುದು ಬೇಸರದ ಸಂಗತಿ. ಇದೊಂದು ದೌರ್ಭಾಗ್ಯವೆಂದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಲ್ಮೆಯ ಸಂಬಂಧಗಳು ಕೆಲ ಯುವಜನರಲ್ಲಿ ಒಂದು ಪ್ರಯೋಗ ಎನ್ನುವ ಮಾದರಿಯಲ್ಲಿ ವ್ಯಾಪಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ಸಾಮಾಜಿಕ ವಿದ್ಯಮಾನ. ತಿಳಿವಳಿಕೆಯಿಂದಲೇ ತೆಗೆದುಕೊಂಡ ವೈಯಕ್ತಿಕ ನಿರ್ಧಾರವಿದು. ಇಂತಹ ನಿರ್ಧಾರಗಳನ್ನು ಬದಲಾಯಿಸುವುದಕ್ಕೆ ಸೂಕ್ತ ಅವಕಾಶಗಳು ಬರಬೇಕಾಗುತ್ತದೆ. ಆದರೆ ಬದಲಾಯಿಸುವ ಕ್ರಮವನ್ನು ಗುರುತಿಸುವುದು ಕಷ್ಟ. ಏಕೆಂದರೆ ಒಬ್ಬರಿಗೆ ಯಶಸ್ವಿಯಾಗಿ ಅನ್ವಯಿಸಿದ ಕ್ರಮ ಇನ್ನೊಬ್ಬರ ಮೇಲೆ ಪ್ರಭಾವ ಬೀರಲಾರದು. ಮೊದಲಿಗೆ ನಿಮ್ಮ ಮಗಳ ಬಗ್ಗೆ ನಕಾರಾತ್ಮಕ ಭಾವನೆಗಳನ್ನು ಹುಟ್ಟಿಸಿಕೊಳ್ಳಬೇಡಿ. ಸದ್ಯದಲ್ಲಿ ತೆಗೆದುಕೊಂಡಿರುವ ನಿರ್ಧಾರ ಅವಳ ವೈವಾಹಿಕ ಬದುಕಿಗೆ ಅನ್ವಯಿಸುವ ವಿಷಯವಾಗಿದ್ದು ಇದನ್ನು ವಿವರಿಸುವಷ್ಟು ಮಾನಸಿಕ ದೃಢತೆ ಅವಳಲ್ಲಿದ್ದಂತೆ ಕಂಡುಬರುವುದಿಲ್ಲ. ಪೋಷಕರಾಗಲಿ, ಸಮುದಾಯವಾಗಲಿ ಒಪ್ಪದ ಸಂಬಂಧವಿದು ಎನ್ನುವುದು ಆಕೆಗೆ ಗೊತ್ತಿರುವುದರಿಂದಲೇ ಮುಚ್ಚಿಟ್ಟಿದ್ದಾಳೆ ಅದು ನಿಮಗೂ ಗೊತ್ತು. ಆದರೆ, ಈಗೇನು ಮಾಡಬೇಕು ಎನ್ನುವುದರ ಕಡೆ ಗಮನ ಹರಿಸುವಾಗ ವಿವೇಚನೆಯನ್ನು ಕಳೆದುಕೊಳ್ಳದಂತೆ ಎಚ್ಚರ ವಹಿಸಬೇಕು. ಇದೇನು ಹೇಳುವಷ್ಟು ಅಥವಾ ಅಂದುಕೊಳ್ಳುವಷ್ಟು ಸುಲಭದ ಸ್ಥಿತಿಯಲ್ಲ; ವಿಧಿಯಿಲ್ಲ, ತಾಳ್ಮೆಯಿಂದಲೇ ಸಮಸ್ಯೆಯನ್ನು ಎದುರಿಸಬೇಕು. ಇದರಿಂದಾಗುವ ಹಿಂಸೆ ಅಂದಾಜಿಸುವುದು ಕಷ್ಟವೆ. ಈ ಸಂಬಂಧಗಳು ಯಾವುದನ್ನು ಪ್ರತಿಪಾದಿಸುತ್ತವೆ ಎನ್ನುವುದನ್ನು ವಿವರಿಸುವುದು ಅಷ್ಟೇನು ಸುಲಭವಲ್ಲ. ಇದೊಂದು ಪೇಚಾಟದ ಸಂಗತಿ. ಕೆಲವರ ಸಾಮಾಜಿಕ ಮತ್ತು ವೃತ್ತಿ ಬದುಕು ವಿಪರೀತವೆನ್ನುವಷ್ಟು ಹೊಸತನವನ್ನು ಪಡೆದುಕೊಂಡಿರುತ್ತದೆ. ಅಂತಹದೊಂದು ಪರಿಸ್ಥಿತಿಯು ನಿಮ್ಮ ಮನೆಯ ಆವರಣವನ್ನು ಪ್ರವೇಶಿಸಿದೆ. ನಿಮ್ಮ ಮಗಳು 'ಲಿವ್-ಇನ್' ಸಂಬಂಧದಿಂದ ಹೊರಬರುವಂತೆ ಮಾಡುವುದಕ್ಕೆ ಮುಂಚೆ ನಿಮ್ಮಲ್ಲಿ ಕೊಂಚ ಬದಲಾವಣೆಗಳಾಗಬೇಕು. ಈ ಮಾದರಿಯ ಸಂಬಂಧ ಹುಟ್ಟಿಕೊಳ್ಳುವುದಕ್ಕೆ ವೃತ್ತಿ ಜೀವನದ ಪರಿಯು ಒಂದು ಪ್ರಮುಖ ಕಾರಣ ಎನ್ನುವ ಅಭಿಪ್ರಾಯ ನನ್ನದು. ಕೆಲಸದ ಒತ್ತಡ, ಪೈಪೋಟಿ ಮತ್ತು ಯಂತ್ರಗಳೊಂದಿಗೆ ಸದಾ ಸಮಯ ಕಳೆಯುವವರ ಮನಸ್ಸಿನಲ್ಲಿ ನಿತ್ಯದ ಬದುಕು ಸಹ ಯಾಂತ್ರಿಕವಾಗಿರಲಿ ಎನ್ನುವ ಭಾವನೆ ಗಟ್ಟಿಯಾಗಿರುತ್ತದೆ. ವೃತ್ತಿಯಷ್ಟೇ ಬದುಕೆಂದುಕೊಳ್ಳುವ ಸ್ವಭಾವ ಪ್ರಬಲವಾಗಿರುವ ಯುವಜನರ ಮೈಮನಸ್ಸುಗಳು ಈ ಮಾದರಿಯ ಸಂಬಂಧದತ್ತ ಹರಿಯುವುದರಲ್ಲಿ ಅಚ್ಚರಿಯೇನಿಲ್ಲ. ಕಾನೂನು, ಸಂಪ್ರದಾಯಗಳು ಸೂಚಿಸುವ ನಿಯಮ, ನೀತಿಗಳನ್ನು ಅನುಸರಿಸದೇ ತಮ್ಮದೇ ಆದ ಷರತ್ತುಗಳ ಮೂಲಕ 'ದಾಂಪತ್ಯಕ್ಕೆ ಒಳಗಾಗಿರುವ ಪರಿಸ್ಥಿತಿ ಇದು. ಪರಸ್ಪರ ಆಕರ್ಷಣೆ, ಅವಲಂಬನೆ, ಸ್ವತಂತ್ರ ಮತ್ತು ಮುಕ್ತ ಭಾವಗಳು ಇಲ್ಲಿ ಪ್ರಧಾನವಾಗಿರುತ್ತದೆ. ಈ ವಿಷಯಗಳ ಬಗ್ಗೆ ನಿಮ್ಮ ಮಗಳೊಂದಿಗೆ ಮೇಲಿಂದ ಮೇಲೆ ಚರ್ಚಿಸಿ. ಆ ಮೂಲಕ ಅವಳಲ್ಲಿ ಬದಲಾವಣೆ ಆದರೂ ಆಗಬಹುದು. ಇದು ಕಾನೂನು/ ಸಂಪ್ರದಾಯ ರೀತಿಯ ವಿವಾಹದಲ್ಲಿ ಕೊನೆಗೊಳ್ಳಲೂಬಹುದು. ಅದನ್ನು ಸಾಧ್ಯವಾಗಿಸುವ ಪರಿಸ್ಥಿತಿಯನ್ನು ಸೃಷ್ಟಿಸುವದರ ಕಡೆ ಗಮನ ಹರಿಸಿ. ಇಂತಹ ಸಂಬಂಧಗಳು ಶಾಶ್ವತವಾಗಿ ನಿಲ್ಲಬಲ್ಲದೆ ಎನ್ನುವ ಪ್ರಶ್ನೆಗೆ ನಿಲ್ಲಲಾರದು ಎನ್ನುವ ಉತ್ತರ ನನ್ನದು. ಏಕೆಂದರೆ ಈ ಸಂಬಂಧಗಳ ಉದ್ದೇಶ ಪ್ರಯೋಗಾತ್ಮಕ ಎನ್ನುವುದಾಗಿರುತ್ತದೆ. ಮಾನಸಿಕ ಬದ್ಧತೆ, ಹೊಂದಾಣಿಕೆ ಯಂತಹ ಸ್ಥಿತಿಗಳು ವ್ಯಕ್ತಿತ್ವ ಮತ್ತು ಮನೋಭಾವಗಳಿಗೆ ಅನುಗುಣವಾಗಿ ಇರಬೇಕು ಎನ್ನುವ ಧೋರಣೆಯನ್ನು ಸಂಬಂಧದಲ್ಲಿರುವ ಸಂಗಾತಿಗಳು ಹೊಂದಿರುತ್ತಾರೆ. ವ್ಯಕ್ತಿ ಇಚ್ಛೆ, ಆಕಾಂಕ್ಷೆಗಳು ಮುಕ್ತವಾಗಿ ಇರಬೇಕೆಂಬ ಭಾವ ಇವರಲ್ಲಿ ಹೆಚ್ಚಾಗಿಯೇ ಇರುತ್ತದೆ. ಆದರೆ ಇವೆಲ್ಲವೂ ಮಾತಿಗಷ್ಟೆ ಎನ್ನುವುದನ್ನು ನಿದರ್ಶಿಸುವ ಪ್ರಕರಣೆಗಳೇ ಹೆಚ್ಚು. ಎಷ್ಟೋ ಸಲ ಇದೊಂದು ಅವಕಾಶವಾದಿ ಸಂಬಂಧವಾಗಿಯೂ ಇರಬಲ್ಲದು. ಇದೆಲ್ಲದರ ಹಿನ್ನೆಲೆಯಲ್ಲಿ ನಿಮ್ಮ ಮಗಳು ಆಯ್ದುಕೊಂಡಿರುವ ಈ ಸಂಬಂಧವನ್ನು ನೋಡಬೇಕಾಗುತ್ತದೆ. ಬಾಲ್ಯದಲ್ಲಿ ಸಂಪ್ರದಾಯದ ಆಚರಣೆ ಮತ್ತು ತನ್ನ ಬೇಕು ಬೇಡಗಳ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಹೊಂದಿದ್ದ ವ್ಯಕ್ತಿ ಇಂತಹ ಅಡ್ಡ ತೀರ್ಮಾನದ ಕಡೆ ವಾಲಿರುವುದಕ್ಕೆ ಅವಳ ಸ್ವಭಾವ ಕಾರಣ ಇರಬಹುದು ಎನಿಸುತ್ತದೆ. ಅಂದರೆ, ವೃತ್ತಿ ಜೀವನದಿಂದ ದೊರಕುವ ತೃಪ್ತಿ, ದಿನದುದ್ದಕ್ಕೂ ದುಡಿಮೆ ಮತ್ತು ಮನೆಯ ವಾತಾವರಣಕ್ಕಿಂತ ಕೆಲಸದ ಜಾಗದಲ್ಲಿ ಒದಗಿಬರುವ ಹಿತ ಭಾವನೆ. ಹವಾನಿಯಂತ್ರಿತ ವಾತಾವರಣ, ಊಟ, ತಿಂಡಿ ಮತ್ತು ಮನರಂಜನೆಗಳು ಆಕೆಯ ಬದುಕಿನ ಉದ್ದೇಶಗಳನ್ನು ಇಂತಹ ಸಂಬಂಧವನ್ನು ಆಯ್ಕೆ ಮಾಡಿಕೊಳ್ಳುವಂತೆ ಮಾಡಿರುವ ಸಾಧ್ಯತೆಗಳು ಇವೆ. ತನ್ನತನದ ನಿರೀಕ್ಷೆ, ಕೌಟುಂಬಿಕ ಸಂಬಂಧಗಳ ಬಗ್ಗೆ ಆಕೆಯು ರೂಢಿಸಿಕೊಂಡಿರುವ ಭಾವನೆಗಳೇನೆಂಬುದನ್ನು ತಿಳಿದುಕೊಳ್ಳುವುದರ ಮೂಲಕ ಅವಳ ಮನದ ಸ್ಥಿತಿಯನ್ನು ಬದಲಾಯಿಸುವ ಪ್ರಯತ್ನವಾಗಬೇಕಾಗುತ್ತದೆ. ಹಿಂಸೆ, ಒತ್ತಾಯಗಳ ಮೂಲಕ ಸ್ವಭಾವವನ್ನು ಬದಲಾಯಿಸುವ ಪ್ರಯತ್ನ ಮಾಡದಿರುವುದೇ ಉತ್ತಮ.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ:** ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122